ತುಮಕೂರು ಡಿಸ್ಟ್ರಿಕ್ಟು.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ, ತುಮಕೂರು ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ಕಂಡ ತಾಲ್ಲೂಕುಗಳಲ್ಲಿರುವ ಸರ್ಕಾರಿ ಜಂಗ್ಲಿಗಳು (ದೇವರಾಯದುರ್ಗ, ಮದ್ದಗಿರಿ, ಹುಲಿಯೂರುದುರ್ಗವೂ ಕೇರಿ) ಅರಗಿನ ಇಜಾರೆಯು ಸ್ಯ1887—88–1888 89—ಮತ್ತು 1889—90 ಈ ಮೂರು ಸರಕಾರಿ ಸಾಲ್‌ಗಳಿಗಾಗಿ ತುಮಕೂರು ಹೆಡ್ ಕ್ವಾರಟರ್ ಮೊಕ್ತಾಂನಲ್ಲಿ ಡೆಪ್ಯುಟಿ ಕಮ್ಮಿಷ್ಣ ನಾಹೇಬರವರ ಆಫೀಸಿನಲ್ಲಿ ಡೆಪ್ಯುಟಿ ಕಮ್ಮಿಷನರವರು ಅಥವಾ ಹಾಜರಿರುವ ಅಸಿಸ್ಟೆಂಟ್ ಕಮ್ಮಿಷನರವರ ಮುಂದೆ 1887ನೇ ಇಸವಿ ಫಿಬ್ರವರಿ ತಾರೀಖು 5ರಲ್ಲು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತೆ.

ತುಮಕೂರು	..	ಮದ್ದಗಿರಿ	..	ಚಿಕ್ಕನಾಯಕನಹಳ್ಳಿ	
ಖರಾ	..	ಗುಬ್ಬಿ	..	ತಿಪಟೂರು	
ಪಾವಗಡ	..	ಕುಣಿಗಲ್			

2. ಚಿಡದರಖಾಸ್ತುದಾರನು ಇಜಾರೆಯು ಅವನ ಹೆಸರಿಗೆ ನಿಂತ ಕೂಡ್ಲೆ ವಟ್ಟು ಇಜಾರೆ ಮೊಬಲಗು ಪೈಕಿ ನಾಲ್ಕು ಖಿಸ್ತಿಗೆ ಸಮನಾದ ಮೊಬಲಗನ್ನು ನಗದಾಗಿಯೂಗಲಿ ಕರೆನ್ಸಿ ನೋಟ್‌ಗಳ ಮೂಲಕವಾಗಲಿ ಡಿಪಾಜಿಟು ಇಡತಕ್ಕದ್ದು ಹಾಗೆ ಇಡುವದಕ್ಕೆ ತಪ್ಪಿದರೆ ಇಜಾರೆಯು ಕೂಡ್ಲೆ ಅವನ ಅವಗುಣಕ್ಕೆ ಹರಾಜ್ ಮೂಡಲ್ಪಟ್ಟು ಹಾಗೆ ಹರಾಜ್ ಮಾಡುವದ್ದರಿಂದ ವೆಂಟಾಗಬಹುದಾದ ಯಾವ ನಷ್ಟಕ್ಕಾಗಲಿ ಅವನನ್ನು ಗುರಿಮಾಡಲ್ಪಡುವದು.

3. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಇಜಾರೆ ಕೆಲಸದ ಮೇಲೆ 1887ನೇ ಇಸವಿ ಏಪ್ರೆಲ್ ಗುರ್ರೆ ತಾರೀಖಿನಲ್ಲಿ ಪ್ರವೇಶಿಸತಕ್ಕದ್ದು ಮತ್ತು ಆವನು ಮೊದಲನೇ ತಿಂಗಳ ಖಿಸ್ತನ್ನು 1887ನೇ ಇಸವಿ ಮೇ 15ನೇ ಮುಕ್ತಾಮಿನಲ್ಲಿ ಆಗಲಿ ಯಾ ತಪ್ಪಿದರ್ವದಲ್ಲಿ ಆಗಲಿ ಪಾವತೀಮಾಡಬೇಕಲ್ಲದೆ ತರುವಾಯದ ಎಲ್ಲಾ ಮಾಹೇವಾರಿ ಖಿಸ್ತುಗಳನ್ನು ಪ್ರತಿ ಮಾರನೇ ತಿಂಗಳು 15ನೇ ತಾರೀಖಿನ ಒಳಗಾಗಿ ಪಾವತೀ ಮಾಡತಕ್ಕದ್ದು. ಈ ಬಾಬತು ಮಾಹೇವಾರಿ ಖಿಸ್ತು ಮೊಬಲಗು ಪಾವತೀ ಮಾಡುವದರಲ್ಲಿ ಡಿಪಾಜಿಟ್ ಇಡಲ್ಪಟ್ಟ ಮೊಬಲಗು ಲಿಖ್ತಕ್ಕೆ ಕೇರಿಸಿಕೊಳ್ಳಲ್ಪಡಲಾರದು. 15ನೇ ತಾರೀಖಿಗೆ ಯಾರಿ ಪಾವತೀ ಮಾಡಲ್ಪಡುವ ಖಿಸ್ತು ಮೊಬಲಗಿಗೆ ಸಾಲೀಯಾನಾ ಶೇ ಕಡಾ 6 ರೂಪಾಯಿ ಪ್ರಕಾರ ಪೂರಾ ತಿಂಗಳ ಬಡ್ಡಿಯನ್ನು ತೆಗದುಕೊಳ್ಳಲಾಗುವದು.

4. ಇಜಾರಾದಾರನಿಂದ ಪಾವತೀ ಮಾಡಲ್ಪಡಬೇಕಾದ ಮಾಹೇವಾರಿ ಖಿಸ್ತು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ವಂದಾಣಿ ಯಂತೆ ಲೋಕಲ್‌ಸೆಸ್ ಛಾರ್ಜು ಮಾಡಲ್ಪಡುವದು.

5. ಮೇಲೆ ಕಂಡ ಖಿಸ್ತು ಮೊಬಲಗುಗಳು ಕ್ರಮವಾಗಿ ಯರಡು ತಿಂಗಳು ವರಿಗೆ ಪಾವತಿ ಮಾಡುವದಕ್ಕೆ ತಪ್ಪಿದರೆ ಯಾ ಸಾವಕಾಶವಾದರೆ ಇಜಾರೆಯು ಸ್ಪೂಟಾಗಿ ರದ್ದು ಮಾಡಲ್ಪಡುವದಕ್ಕೆ ಗುರಿಯಾಗತಕ್ಕದ್ದು. ಮತ್ತು ತಪ್ಪಿಹೋದ ಕಂಟ್ರಾಕ್ಟುದಾರನ ಅವಗುಣಕ್ಕೆ ಇಜಾರೆಯು ಪುನಶ್ಚ ಹರಾಜ್ ಮಾಡಲ್ಪಡುವದಲ್ಲದೆ ಡಿಪಾಜಿಟು ಇಡಲ್ಪಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು, ಸರಕಾರಕ್ಕೆ ಬರತಕ್ಕ ಬಾಕಿ ಮೊಬಲಗನ್ನು ಜಮೀರ್ ಬಾಬಿನ ಬಾಕಿಯಂತೆ ವಸೂಲ್ಮಾಡಲಾಗುವದು.

6 ಜಂಗ್ಲಿಗಳಲ್ಲಿ ತಾನು ಅರಗು ಜವಾಯಿಸುವಂಥಾ ಮರಗಳನ್ನು ಕಡಿಯುವದಕ್ಕಾಗಲಿ ಸಾಗಿಸುವದಕ್ಕಾಗಲಿ ಅಥವಾ ಊನ ಪಡಿಸುವದಕ್ಕಾಗಲಿ ಅಧಿಕಾರ ವೆಂಟಾಗುವದಿಲ್ಲ.

7. ಕಂಟ್ರಾಕ್ಟುದಾರನು ಮಂಜೂರ್ಮಾಡಲ್ಪಟ್ಟ ಇನಾಂದಾರ್ರುಗಳ ಹಕ್ಕುದಾರಿಗಳಲ್ಲಿ ಪ್ರವೇಶಿಸಕೂಡದು.

8. ಡೆಪ್ಯುಟಿ ಕಮ್ಮಿಷ್ಣರವರು ಯಾವ ಸವಾಲನ್ನಾಗಲಿ ಯಾವ ಸಬಬೂ ತಿಳಿಸದೆ ಅಂಗೀಕರಿಸುವ ಯಾ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ಉಳಿಸಿಕೊಂಡಿರುತ್ತಾರೆ.

ತಾರೀಖು 17ನೇ ಡಿಸಂಬರ್ 1886.

ಬಿ. ಎ. ಕೃಷ್ಣಮೂರ್ತಿ, ಡೆಪ್ಯುಟಿ ಕಮ್ಮಿಷನರ್.

ಫ್ರೈಂಚ್‌ರಾಕ್ಸ್ ಸಬ್ ಡಿವೀರ್ಜ್.

ತಾರೀಖು 8ನೇ ಜನವರೀ 1887.

ಫ್ರೈಂಚ್‌ರಾಕ್ಸ್ ಸಬ್ ಡಿವೀರ್ಜ್ ಅತ್ತಿಕುಪ್ಪ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಈ ಕೆಳಗೆ ನಮೂದಿಸುವ ದಸ್ತಾವೇಜನ್ನು ಕ್ರಮವಾದ ವಾರಸ್‌ದಾರ್ರಾಗಲಿ ಅಥವಾ ಅಧಿಕಾರ ಹೊಂದಿದ ಮುಕ್ತಾರೀಕನಾಗಲಿ ಈ ತಾರೀಖು ಲಾಗಾಯತು ವೊಂದು ತಿಂಗಳ ವೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಣ ಆಕ್ಟು 85ನೇ ಸೆಕ್ಷನ್ ಪ್ರಕಾರ ನಾಶಪಡಿಸಲ್ಪಡುತ್ತೆ.